ದಿನಾಂಕ: 06-06-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀಸವಾಲುಃ ಶ್ರೀ.ಡಿ.ಎಸ್.ಬಿ. ವಾದಿ ಪರ ವಕೀಲರಿಂದಃ**

ಈ ದಾವೆಯನ್ನು ವಾದಿ 11 ಆಸ್ತಿಗಳ ಮೇಲೆ ಸಲ್ಲಿಸಿದ್ದಾರೆ. ಆ 11 ಆಸ್ತಿಗಳ ಕ್ಷೇತ್ರ ಎಷ್ಟು ಇದೆ ನನಗೆ ಗೊತ್ತಿಲ್ಲ. ಸದರಿ ಜಮೀನುಗಳು ಯಾದವಾಡ ಮತ್ತು ರಡೇರಹಟ್ಟಿ ಗ್ರಾಮದಲ್ಲಿ ಇವೆ. ವಾದ ಪತ್ರದಲ್ಲಿ ತೋರಿಸಿರುವ ವಂಶಾವಳಿ ಸರಿ ಇರುತ್ತದೆ. ವಾದಿಯ ಗಂಡ ಬಸಪ್ಪ ಎಂದರೆ ಸರಿ.

2. ದುಂಡಪ್ಪನ ಮಕ್ಕಳ ನಡುವೆ ಬಾಯಿ ಮಾತಿನಲ್ಲಿ ವಾಟ್ನಿ ಆಗಿತ್ತು ಎಂದು ನನಗೆ 5ನೇ ಪ್ರತಿವಾದಿ ಹೇಳಿದ್ದರು. ಸದರಿ ವಾಟ್ನಿಯ ಪ್ರಕಾರ ಯಾವ ದಾಖಲೆಗಳ ಆಧಾರದ ಮೇಲೆ ಡೈರಿಗಳಾಗಿವೆ ಎಂದು ನನಗೆ ಹೇಳಿಲ್ಲ. ಬಾಯಿ ಮಾತಿನಲ್ಲಿ ವಾಟ್ನಿಯಾದ ನಂತರ 2000 ಸಾಲಿನಲ್ಲಿ ವಾಟ್ನಿ ಪತ್ರ ಬರೆದಿರುತ್ತಾರೆ. ನಾನು ಸದರಿ ವಾಟ್ನಿ ಪತ್ರವನ್ನು ನೋಡಿರುತ್ತೇನೆ. ಸದರಿ ವಾಟ್ನಿ ಪತ್ರಕ್ಕೆ ನಾನು ಹಿರಿಯನಾಗಿ ಸಹಿ ಮಾಡಿಲ್ಲ.

3. ದಾವಾ ಆಸ್ತಿಗಳೆಲ್ಲವೂ ವಾದಿ ಮತ್ತು ಪ್ರತಿವಾದಿಯರ ಕುಟುಂಬದ ಆಸ್ತಿಗಳು ಎಂದರೆ ಸರಿ. ದುಂಡಪ್ಪ ಗಿರಿಮಲ್ಲಪ್ಪ ಮುಗಳಖೋಡ ಇವರ ಮಕ್ಕಳ ನಡುವೆ ಯಾವತ್ತೂ ವಾಟ್ನಿಯಾಗಿಲ್ಲ ಆದರೂ ಸಹ ವಾಟ್ನಿ ಆಗಿದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈಗಲೂ ಸಹ ದಾವಾ ಆಸ್ತಿಗಳ ಕಬ್ಜಾ ವಹಿವಾಟಿಯಲ್ಲಿ ವಾದಿಯು ಸಹ ಇದ್ದಾರೆ ಎಂದರೆ ಸರಿಯಲ್ಲ. ದಾವಾ

ಆಸ್ತಿಗಳಲ್ಲಿ ವಾದಿಗೆ ಪಾಲು ಕೊಡಬೇಕಾಗುತ್ತದೆ ಎಂದು ಹೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

4. ಈ ಹೊತ್ತಿನವರೆಗು ಕಾನೂನುಬದ್ಧವಾಗಿ ಅಂದರೆ ನ್ಯಾಯಾಲಯದ ಡಿಕ್ರೀಯ ಪ್ರಕಾರ ಅಥವಾ ನೋಂದಾಯಿತ ವಾಟ್ನಿ ಪತ್ರದ ಪ್ರಕಾರ ವಾಟ್ನಿ ಆಗಿಲ್ಲ ಎಂದರೆ ಸರಿಯಲ್ಲ. ಬಸಪ್ಪ ಇವರ ಮರಣಾ ನಂತರ ವಾದಿಯೇ ತಮ್ಮ ಗಂಡನ ಪಾಲನ್ನು ಸಾಗುವಳಿ ಮಾಡಿಕೊಂಡು ಇದ್ದಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ವಾದಿಗೆ ಪಾಲು ಕೊಡಬೇಕಾಗುತ್ತದೆ ಎಂದು ಹೇಳಿ ಪ್ರತಿವಾದಿಯರಿಗೆ ಅನುಕೂಲ ಮಾಡಿಕೊಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಬಸಪ್ಪ ಇವರಿಗೆ ವಾದಿಯು ಮಾತ್ರ ಹೆಂಡತಿ, ತಂಗೆವ್ವ ಎಂದು ಬೇರೆ ಯಾವ ಹೆಂಡತಿ ಇರುವುದಿಲ್ಲ ಎಂದರೆ ಸರಿಯಲ್ಲ. ತಂಗೆವ್ವ ಬಸಪ್ಪ ಇವರ ಹೆಂಡತಿ ಎಂದು ಯಾವುದೇ ದಾಖಲೆ ಹಾಜರ ಮಾಡಿಲ್ಲ ಎಂದರೆ ಸರಿಯಲ್ಲ. ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಪ್ರಕಾರ ಬೆರಳಚ್ಚು ಮಾಡಲಾಗಿದೆ)
ಓ ಹೇ ಕೇ ಸರಿ ಇದೆ.

(ಉಮೇಶ ಎಸ್. ಅತನೂರೆ)
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಗೋಕಾಕ.

ಸಾಕ್ಷಿಯ ಸಹಿ